ದಿಃ 15.09.2025 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್ ಆರ್ ಪಿ ವಕೀಲರಿಂದಃ

ನಾನು ವ್ಯವಸಾಯ ಮತ್ತು ತರಕಾರಿ ವ್ಯಾಪಾರ ಮಾಡುತ್ತೇನೆ. ನನ್ನದು ಸ್ವಂತ ಜಮೀನು ಇರುವುದಿಲ್ಲ. ನನ್ನದು ಬಿ ಪಿ ಎಲ್ ಕಾರ್ಡ ಇರುವುದಿಲ್ಲ. ನನ್ನದು ಅಂತೋದಯ ಕಾರ್ಡ ಇದೆ. ಅಂತೋದಯ ಕಾರ್ಡನ್ನು ಅತೀ ಬಡವರಿಗೆ ಕೊಡುತ್ತಾರೆ ಎಂದರೆ ಸರಿ. ಆರೋಪಿ ನನಗೆ 10-12 ವರ್ಷದಿಂದ ಪರಿಚಯ. ಹಣ ಕೇಳಲು ಆರೋಪಿ ಒಬ್ಬನೇ ಬಂದಿದ್ದನು. ಹಣ ನೀಡಿದ ತಾರೀಖು ನೆನಪಿರುವುದಿಲ್ಲ. ನನ್ನದು ಕೆ ವಿ ಜಿ ಬಿ ಬಾಂಕಿನಲ್ಲಿ ಮಾತ್ರ ಅಕೌಂಟ ಇದೆ. ನನ್ನ ಆದಾಯ ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ.

ಹಾನಗಲ್ ನಲ್ಲಿ ಸ್ವಾತಿ ಸಾಯಿ ಮಂದಿರ ಅಂತಾ ಒಂದು ಬಟ್ಟೆ ಅಂಗಡಿ ಇತ್ತು ಎಂದರೆ ಸರಿ. ಆ ಅಂಗಡಿಯ ಮಾಲೀಕರು ಯಾರು ಅಂತಾ ನನಗೆ ಗೊತ್ತಿಲ್ಲ. ಸದರಿ ಅಂಗಡಿಯ ಮಾಲೀಕ ಪರಮೇಶ ಸಿದ್ದೋಜಿ ಎಂದರೆ ನನಗೆ ಗೊತ್ತಿಲ್ಲ. ಸಿಂಡಿಕೇಟ್ ಬ್ಯಾಂಕ ಖಾತೆ ನಂಬರ ಅದು ಯಾರ ಹೆಸರಿನಲ್ಲಿದೆ ಅಂತಾ ನನಗೆ ಗೊತ್ತಿಲ್ಲ. ನಿಪಿ-1 ಚೆಕ್ ಇದು ಆರೋಪಿ ಚೆಕ್ ಇರುವುದಿಲ್ಲ ಪರಮೇಶ ಸಿದ್ದೋಜಿ ಅವರ ಚೆಕ್ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ ನಲ್ಲಿರುವ ಸಹಿ ಆರೋಪಿ ಸಹಿ ಅಲ್ಲ ಪರಮೇಶ ಸಿದ್ದೋಜಿ ಅವರ ಸಹಿ ಎಂದರೆ ಸರಿಯಲ್ಲ. ನಿಪಿ-1 ಚೆಕ್ ಸ್ವಾತಿ ಸಾಯಿ ಮಂದಿರ ಫರ್ಮನ ಚೆಕ್ ಎಂದರೆ ಸರಿಯಲ್ಲ. ಸದರಿ ಫರ್ಮ ಪರಮೇಶ ಸಿದ್ದೋಜಿ ಅವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ.

ಬ್ಯಾಂಕುಗಳ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಿಂಡಿಕೇಟ್ ಬ್ಯಾಂಕ ಇದು ಕೆನರಾ ಬ್ಯಾಂಕಿಗೆ ದಿಃ 01.04.2020 ರಂದು ಮರ್ಜ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರ್ ಬಿ ಐ ಗೈಡಲೈನ್ಸ ಪ್ರಕಾರ ಸಿಂಡಿಕೇಟ್ ಬ್ಯಾಂಕನ ಚೆಕ್ ಅವದಿಯು ದಿಃ 30.06.2021 ರವರೆಗೆ ಮಾತ್ರ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅಮಾನ್ಯವಾದ ಚೆಕ್ ನ್ನು 2023 ರಲ್ಲಿ ಬಾಂಕಿಗೆ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನಿಪಿ-1 ಚೆಕ್ ಆರೋಪಿಗೆ ಸಂಬಂಧಿಸಿದ ಚೆಕ್ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ 3 ಲಕ್ಷ ಹಣ ನೀಡಿದ್ದೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ವಾತಿ ಸಾಯಿ ಚೆಕ ಫರ್ಮನ ಚೆಕ್ ನ್ನು ತಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಬ್ಯಾಂಕಿನೊಂದಿಗೆ ಮಿಲಾಪಿಯಾಗಿ ಖೊಟ್ಟಿ ಹಿಂಬರಹವನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ–1 ರ ಚೆಕ್ ನ ಮೇಲಿರುವ ಸಹಿ ಮತ್ತು ನಿಪಿ–5 Acknowledgement ಮೇಲೆ ಇರುವ ಸಹಿ ಬೇರೆ ಬೇರೆ ಇವೆ ಎಂದರೆ ಸರಿಯಲ್ಲ. ಪಿರ್ಯಾದಿಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಸುಳ್ಳು ಮಾಹಿತಿ ನೀಡಿ ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಚೆಕ್ ಪಡೆದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್